VIJAYAKUMAR KANNUR
Digitally signed by VIJAYAKUMAR KANNUR
Date: 2025.07.18 10:43:19 +0530



**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 17.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಸಿ ಯು ವಕೀಲರಿಂದ :**

ಮಹೇಶ್ ಮತ್ತು ರಮೇಶ ಇವರು ಖಾಸ ಸಹೋದರರು ಎಂದರೆ ಸರಿ. ವಾದಿ ಮಹೇಶನ ಹೆಂಡತಿಯಾಗಿದ್ದು , ನಾನು ರಮೇಶನ ಹೆಂಡತಿಯಾಗಿರುವೆನು. ಮಹೇಶ ದಿಃ 07.05.2021 ರಂದು ಮೃತ ಪಟ್ಟಿರುವರು ಎಂದರೆ ಸರಿ. ರಮೇಶ ದಿಃ 22.05.2016 ರಂದು ಮೃತ ಪಟ್ಟಿರುವರು ಎಂದರೆ ಸರಿ. ರಮೇಶ ಮತ್ತು ಮಹೇಶನ ಜಂಟಿ ಹೆಸರಿನಲ್ಲಿ ಪಿಕೆಪಿಎಸ್ ಚಿನಾಳ್ ಬ್ಯಾಂಕ್ ನಲ್ಲಿ ಎಫ್ ಡಿ ಜಂಟಿ ಖಾತೆ ಹೊಂದಿದ್ದರು ಎಂದರೆ ಸರಿ. ಎಫ್ ಡಿ ನಂ. 369 ರೂ. 38 ಲಕ್ಷ 31 ಸಾವಿರ ಹಣ ದಿಃ 24.04.2019 ರವರೆಗೆ ಜಮೆ ಇತ್ತು ಎಂದರೆ ಸರಿ. ಸದರಿ ಖಾತೆಯನ್ನು ನಾನು ಮತ್ತು ಪ್ರತಿವಾದಿ 1 ರವರು ಕೂಡಿಕೊಂಡು ಹೋಗಿ ಆ ಎಫ್ ಡಿ ಜಂಟಿ ಖಾತೆಯ ರಿನೆವಲ್ ನ್ನು ಮಾಡಿಸಿರಲಿಲ್ಲ ಎಂದರೆ ಸರಿ.

2. ಮಹೇಶ ಮೃತ ಪಟ್ಟ ನಂತರ ವಾದಿಯ ಹೆಸರು ಮತ್ತು ನನ್ನ ಗಂಡ ರವೇಶ ಮೃತ ಪಟ್ಟ ನಂತರ ನಮ್ಮ ಹೆಸರು ಎಫ್ ಡಿ ಖಾತೆಗೆ ಜಂಟಿಯಾಗಿ ದಾಖಲು ಇರುವುದು ಎಂದರೆ ಸರಿ. ಈ ಎಫ್ ಡಿ ಖಾತೆಯ ಮೊತ್ತಕ್ಕೆ ವಾದಿ ಮತ್ತು ನನ್ನ ಹೆಸರು ಜಂಟಿಯಾಗಿ ದಾಖಲು ಆಗಿರುವುದರಿಂದ, ನಾವಿಬ್ಬರೇ ಆ ಮೊತ್ತಕ್ಕೆ ಹಕ್ಕುದಾರರು ಎಂದರೆ ಸರಿಯಲ್ಲ, ಪ್ರತಿವಾದಿ 3 ರವರು ಸಹ ಹ ಕ್ಕುದಾರರು ಎಂದು ಸಾಕ್ಷಿ ಉತ್ತರಿಸುವರು. ಈ ಎಫ್ ಡಿ ಮೊತ್ತವು ವಾದಿ ಮತ್ತು ನನ್ನ ಹೆಸರಿನಲ್ಲಿ ಜಂಟಿಯಾಗಿ ಇರುವುದರಿಂದ ನಾವಿಬ್ಬರೇ ಸರಿ ಸಮಾನವಾಗಿ ಪಡೆಯುವ ಹಕ್ಕನ್ನು ಹೊಂದಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರಿಗೆ ಸಹ ಹಕ್ಕು ಇರುವುದು.

3. ಪ್ರತಿವಾದಿ 3 ರವರು ನನ್ನ ತಾಯಿಯಾಗಬೇಕು. ಪ್ರತಿವಾದಿ 3 ರವರು ಈ ಎಫ್ ಡಿ ಖಾತೆಯ ಮೊತ್ತಕ್ಕೆ ಸಂದಂಬಪಟ್ಟಂತೆ ಮಹೇಶ ಮತ್ತು ರಮೇಶ ಇವರ ಜೀತಾವಧಿಯಲ್ಲಿ ಯಾವುದೇ ಕಾಲಕ್ಕೂ ತನ್ನದು ಹಕ್ಕು ಇರುವುದು ಎಂದು ಅವರಿಗೆ ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಮಹೇಶ ಮತ್ತು ರಮೇಶ ಮೃತ ಪಟ್ಟ ನಂತರ ಇವತ್ತಿನವರೆಗೂ ಪ್ರತಿವಾದಿ 3 ರವರು ಎಫ್ ಡಿ ಖಾತೆಯಲ್ಲಿರುವ ಹಣದಲ್ಲಿ ತನಗೂ ಪಾಲು ಇರುವುದು ಈ ದಾವೆ ದಾಖಲು ಮಾಡುವವರೆಗೂ ತನ್ನ ಹಕ್ಕನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಎಫ್ ಡಿ ಮೊತ್ತದಲ್ಲಿ ವಾದಿಗೆ ಮತ್ತು ನನಗೆ ಸಮಪಾಲು ಬರುತ್ತದೆ ಎಂಬ ಕಾರಣಕ್ಕೆ ಪ್ರತಿವಾದಿ 3 ರವರಿಗೂ ಸಹ ಈ ಎಫ್ ಡಿ ಮೊತ್ತದಲ್ಲಿ ಪಾಲು ಬರುವುದು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರಿಗೆ ಬರುವ ಪಾಲಿನ ಮೊತ್ತವನ್ನು ಪಡೆಯುವ ಸಲುವಾಗಿ ಮತ್ತು ವಾದಿಗೆ ಸಮನಾದ ಪಾಲು ಸಿಗಬಾರದು ಎಂಬ ಕಾರಣಕ್ಕೆ ನಾನು ದುರುದ್ದೇಶ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಫ್ ಡಿ ಮೊತ್ತದಲ್ಲಿ ನನಗೆ ಮತ್ತು ಪ್ರತಿವಾದಿ 3 ರವರಿಗೆ ಪಾಲು ಇರುವುದು ಎಂದು ಎರುದು ಕ್ಲೇಮ್ ನ್ನು ಮಂಡನೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಈ ಮೂರು ಜನರಿಗೆ ಪಾಲು ಇರುವುದು.

4. ಬಿಳಗಿ ತಾಲೂಕಿನ ನನ್ನ ಮಾವನಾದ ಹಣಮಂತನ ಹೆಸರಿನಲ್ಲಿ ಇರುವ 3 ಜಮೀನುಗಳು ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ಮುಳುಗಡೆ ಆಗಿರುವವು ಎಂದರೆ ಸರಿ. ಈ ಪರಿಹಾರದ ಹಣವು ಮೃತ ರಮೇಶ, ಮೃತ ಮಹೇಶ, ಇವರ ತಾಯಿ ಅವ್ವಾಜವ್ವ ಹಾಗೂ ಇವರ ಸಹೋದರಿ ಭಾಗೀರಥಿಯ ಹೆಸರಿನಲ್ಲಿ ಜಂಟಿಯಾಗಿ ಬ್ಯಾಂಕ್ ನಲ್ಲಿ ಜಮೆ ಆಗಿರುವವು ಎಂದರೆ ಸರಿ. ಅವ್ವಾಜವ್ವ ಮತುತ ಭಾಗೀರಥಿ ಈ ಪರಿಹಾರ ಹಣವನ್ನು ಬ್ಯಾಂಕ್ ನಿಂದ ತೆಗೆದು ಮಹೇಶ ಮತ್ತು ರಮೇಶನ ಹೆಸರಿನಲ್ಲಿ ಎಫ್ ಡಿ ಇಡಲು ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿರವರು ಎಂದರೆ ಸರಿಯಲ್ಲ. ಅವ್ವಾಜವ್ವ ಮತ್ತು ಭಾಗೀರಥಿ ಆ ಪರಿಹಾರದ ಹಣದಲ್ಲಿ ಸ್ವಲ್ಪ ಹಣವನ್ನು ತೆಗೆದುಕೊಂಡು ಉಳಿದ ಹಣವನ್ನು ಎಫ್ ಡಿ ಇಡಲು ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿರವರು ಎಂದರೆ ಸರಿಯಲ್ಲ. ಈ ಪರಿಹಾರ ಹಣ 2009 ರಲ್ಲಿ ಜಮೆ

ಆಗಿರುವುದು ಎಂದರೆ ಸರಿ. ಈ 4 ಜನರು 2013 ರಲ್ಲಿ ಬ್ಯಾಂಕ್ ನಿಂದ ಮರಳಿ ಪಡೆದಿರುವರು ಎಂದರೆ ಸರಿ. 2009 ರಿಂದ 2013 ರ ಅವಧಿಯಲ್ಲಿ ಅವ್ವಾಜವ್ವ ಮತ್ತು ಭಾಗೀರಥಿ ತಮ್ಮದು ಪಾಲು ಇರುವುದಿಲ್ಲ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. 2009 ರಿಂದ 2013 ರವರೆಗೆ ಈ ದಾವೆ ದಾಖಲು ಮಾಡುವ ವರೆಗೂ ಪ್ರತಿವಾದಿ 3 ರವರು ತಮ್ಮದು ಪಾಲು ಇರುವುದು ಎಂದು ಹೇಳಿ ಯಾವುದೇ ದಾವೆ ದಾಖಲು ಮಾಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿ 3 ರವರು ತನ್ನ ಪಾಲಿನ ಹಣ ಪಡೆದಿರುವುದಂರಿ ಆ ಕಾರಣಕ್ಕೆ ಅವಳು ದಾವೆ ದಾಖಲು ಮಾಡಿರುವಳು ಎಂದರೆ ಸಾಕ್ಷಿ ಮೃತ ರವೇಶ ವತ್ತು ಮಹೇಶ ಇವರು ಪ್ರತಿವಾದಿ 3 ರವರಿಗೆ ಹೇಳದೆ ಎಫ್ ಡಿ ಯಾಗಿ ಇಟ್ಟಿರುವರು. ಈ ಎಫ್ ಡಿ ಮೊತ್ತ ಕೇವಲ ಮೃತ ರಮೇಶ ಮತ್ತು ಮಹೇಶ್ ನಿಗೆ ಸಂಬಂದಪಟ್ಟಿರುವುದು ಎಂದರೆ ಸರಿಯಲ್ಲ. ರಮೇಶ ಮತ್ತು ಮಹೇಶ್ ಮೃತ ಪಟ್ಟ ನಂತರ ಈ ಎಫ್ ಡಿ ಮೊತ್ತದಲ್ಲಿ ವಾದಿಗೆ ಮತ್ತು ನನಗೆ ಮಾತ್ರ ಪಾಲು ಇರುವುದು ಎಂದರೆ ಸರಿಯಲ್ಲ. ಈ ಎಫ್ ಡಿ ಮೊತ್ತದಲ್ಲಿ ಪ್ರತಿವಾದಿ 3 ರವರಿಗೆ 1/3 ಹಿಸ್ಸೆ ಇರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸೋರಗಾಂವ ಗ್ರಾಮದಲ್ಲಿ ನಮ್ಮ ಮನೆತನದ ಹೆಸರಿನಲ್ಲಿ ಜಮೀನುಗಳು ಮತ್ತು ಮನೆಗಳ ಆಸ್ತಿ ಇರುವವು ಎಂದರೆ ಸರಿ. ಈ ಆಸ್ತಿಗಳಲ್ಲಿ ಇವತ್ತಿನವರೆಗೂ ಪಾಲು ಕೇಳಿ ದಾವೇ ಾಹಲು ಮಾಡಿರುವುದಿಲ್ಲ ಮತ್ತು ಈ ದಾವೆಯಲ್ಲಿ ಅವುಗಳನ್ನು ದಾವಾ ಆಸ್ತಿಯನ್ನಾಗಿ ಸೇರ್ಡೇ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಆ ಆಸ್ತಿಗಳನ್ನು ಹಿರಿಯರ ಸಮಕ್ಷಮದಲ್ಲಿ ಕೇಳಿಕೊಂಡಿರುವೆವು ಎಂದು ನುಡಿಯುವರು. ವಾದಿಗೆ ಈ ಎಫ್ ಡಿ ಹಣದಲ್ಲಿ ಪಾಲು ನೀಡಬಾರದು ಎಂಬ ಕಾರಣಕ್ಕೆ ಬೇರೆ ಆಸ್ತಿಗಳು ಇರುವುದಾಗಿ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಫ್ ಡಿ ಮೊತ್ತವು ವಾದಿ ಮತ್ತು ನನ್ನ ಹೆಸರಿನಲ್ಲಿ ಇರುವುದರಿಂದ ಬೇರೆ ಆಸ್ತಿಗಳನ್ನು ಸೆರ್ಪಡೆ ಮಾಡುವಂತ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ವಾದಿಯ ಹೆಸರಿಲ್ಲಿ ಈ ಎಫ್ ಡಿ ಮೊತ್ತ ಇರುವುದರಿಂದ ಆ ಕಾರಣಕ್ಕೆ ವಾದಿಯ ಮಕ್ಕಳಾಗಲಿ ಮತ್ತು ನನ್ನ ಮಕ್ಕಳಾಗಲಿ ಈ ದಾವೆಗೆ ಅವಶ್ಯಕ ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿಯಲ್ಲ. ಈ ಎಫ್ ಡಿ ಮೊತ್ತದಲ್ಲಿ ನನಗೆ ಮತ್ತು

ವಾದಿಗೆ ಮಾತ್ರ ಸಮಪಾಲು ಇರುವುದು ಎಂದರೆ ಸರಿಯಲ್ಲ. ವಾದಿಗೆ ಸಮಪಾಲು ನೀಡಬಾರದು ಎಂಬ ಕಾರಣಕ್ಕೆ ನಾನು ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 3 ರವರು ನನ್ನ ತಾಯಿ ಆಗಿರುವುದರಿಂದ ಈ ಎಫ್ ಡಿ ಮೊತ್ತದಲ್ಲಿ ಹೆಚ್ಚಿನಪಾಲು ಪಡೆಯುವ ಸಲುವಾಗಿ ಪ್ರತಿವಾದಿ 3 ರವರು ಮತ್ತು ನಾನು ಸುಳ್ಳು ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 2 ಮತ್ತು 3 ರವರ ಪರವಾಗಿ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.07.18 10:43:28 +0530